ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 4, September-October 2023, Pp. 12-15
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಕಥಾ ಸಾಹಿತ್ಯ: ಒಂದು ವಿಶ್ಲೇಷಣೆ

**ಡಾ. ಶ್ರೀನಿವಾಸ. ಟಿ**
ಸಹಾಯಕ ಪ್ರಾಧ್ಯಾಪಕ, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಮೈಸೂರು.

**Abstract:**
*ಜೀವನ ಪ್ರೀತಿಯಂತೆಯೇ ಸಹಜವಾಗಿಯೇ ಹುಟ್ಟಿದ ಕಥೆ ಇಂದು ಎಲ್ಲಾ ಸಾಹಿತ್ಯ ಪ್ರಕಾರಗಳಲ್ಲೂ ಹೆಚ್ಚು ಚರ್ಚಿಸಲ್ಪಡುವ ಪ್ರಾಕಾರವಾಗಿದೆ. ಕಥೆ ಹೇಳುವ ಕಲೆ ಹೊಸದೇನಲ್ಲ, ಕಥೆ ಹೇಳಲು ಮಾತು ಬರಲೇ ಬೇಕೆಂದೇನಿಲ್ಲ, ಮೌನದಲ್ಲೂ ನೂರಾರು ಕಥೆಗಳು ಅರಳುತ್ತವೆ. ಕಾದಂಬರಿಯ ತರುವಾಯ ಸಣ್ಣ ಕಥೆಯೆ ಅತ್ಯಂತ ಜನಪ್ರಿಯ ಪ್ರಾಕಾರ. ಕನ್ನಡದಲ್ಲಿ ಸಣ್ಣಕಥೆ ಒಂದು ವಿಶಿಷ್ಟ ರೂಪವಾಗಿ ಜನ್ಮ ತಳೆದುದು ಸುಮಾರು ನೂರು ವರ್ಷಗಳ ಹಿಂದೆ. ಕನ್ನಡದಲ್ಲಿ ಸಣ್ಣಕಥೆಗೆ ವಿಶಿಷ್ಟ ರೂಪ ಕೊಟ್ಟು ಚಾರಿತ್ರಿಕವಾಗಿ ಮೊಟ್ಟ ಮೊದಲು ಕಥೆಗಳನ್ನು ಬರೆದವರು ಪಂಜೆಮಂಗೇಶರಾಯರು. ನಂತರ ಕೆರೂರು ವಾಸುದೇವಾಚಾರ್ಯರು, ಕಾಮತ್, ಎಂ.ಎನ್ ಸಣ್ಣಕಥೆಗಳನ್ನು ಬರೆದರು. ಸುವಾಸಿನಿ ಪತ್ರಿಕೆಯಲ್ಲಿ ಪ್ರಕಟವಾದ ಪಂಜೆ ಮಂಗೇಶರಾಯರ 'ನನ್ನ ಚಿಕ್ಕತಾಯಿ' (1900) ಕನ್ನಡದ ಮೊದಲ ಸಣ್ಣ ಕಥೆಯಾಗಿದೆ. ಸಣ್ಣಕಥೆಯು ಸಾಹಿತ್ಯ ಪ್ರಕಾರವೆಂಬ ಪ್ರಜ್ಞೆಯನ್ನು ಮೂಡಿಸಿ ಅದನ್ನೆ ಮಾಧ್ಯಮವನ್ನಾಗಿ ಬಳಸಿದವರಲ್ಲಿ ಮಾಸ್ತಿ ಮೊದಲಿಗರು. ಇವರ ವಸ್ತುವಿನ ಆಯ್ಕೆ, ದೃಷ್ಟಿ, ತಿಳಿಹಾಸ್ಯ, ಸರಳಶೈಲಿ ಇವು ಕನ್ನಡ ಕಥಾಲೋಕಕ್ಕೆ ಮಾರ್ಗದರ್ಶಕವಾಗಿವೆ. ಇವರ ಕಥೆಗಳು ಹಲವು ಸಂಪುಟಗಳಲ್ಲಿ ಪ್ರಕಟವಾಗಿದ್ದು ಸಾಮಾನ್ಯ ಘಟನೆಗಳನ್ನು ಉತ್ಪ್ರೇಕ್ಷೆಯಿಲ್ಲದೆ ಹೇಳುವ ಕಲೆ ಇವರ ಕಥೆಗಳಲ್ಲಿದ್ದು ಆವೇಶವಿಲ್ಲದ, ಚಮತ್ಕಾರವಿಲ್ಲದ, ವಿಸ್ಮಯವಿಲ್ಲದ, ಉದಾತ್ತ ಗುಣಗಳಿಂದ ತುಂಬಿದ ಆತ್ಮದ ಒಂದು ಚೇತನವನ್ನು ಇವರ ಕಥೆಗಳಲ್ಲಿ ಕಾಣುತ್ತೇವೆ.*

**Keywords:** *ಕನ್ನಡ ಸಾಹಿತ್ಯ, ಕಥಾ ಸಾಹಿತ್ಯ, ಪಂಜೆ ಮಂಗೇಶರಾಯರು, ನನ್ನ ಚಿಕ್ಕತಾಯಿ.*

### ಪೀಠಿಕೆ

ಆಧುನಿಕ ಕನ್ನಡ ಸಾಹಿತ್ಯವು ನವೋದಯ, ಪ್ರಗತಿಶೀಲ, ನವ್ಯ, ದಲಿತ, ಬಂಡಾಯ ಹೀಗೆ ಹಲವು ಅವಸ್ಥಾಂತರಗಳನ್ನು ಕಂಡಂತೆ ಸಣ್ಣಕಥಾ ಪ್ರಪಂಚ ಇದಕ್ಕೆ ಹೊಂದಿಕೊಂಡು ವಿಸ್ತರಿಸುತ್ತಾ, ಆಯಾ ಕಾಲದ ಸ್ಪಂದನಕ್ಕೆ ಜೀವಂತವಾಗಿ ಉಳಿಯಿತು, ಕನ್ನಡ ಸಾಹಿತ್ಯದಲ್ಲಿ ಪ್ರಗತಿಶೀಲ ಚಳುವಳಿ ಸಣ್ಣಕಥೆಯಿಂದಲೇ ಆರಂಭವಾಯಿತು ಎನ್ನಬೇಕು. ಪ್ರಗತಿಶೀಲ ಪಂಥದಿಂದ ಕನ್ನಡ ಸಣ್ಣಕಥೆಯಲ್ಲಿ ಕೆಲವು ಬದಲಾವಣೆಗಳಾಗಿ ಸಮಾಜ ಸಮ್ಮುಖವಾಗಿ ವೈಯಕ್ತಿಕ ತೀವ್ರತೆಯನ್ನು ಕಳೆದು ಕೊಂಡಿತು. ವಸ್ತುವಿನ ಆಯ್ಕೆ ಸೀಮಿತವಾಯಿತು. ಆದರೆ ಬರವಣಿಗೆಗೆ ಹೆಚ್ಚು ವೇಗ, ಮೊನಚು ಬಂತು. ಒಂದು ಬಗೆಯ ಅತೃಪ್ತ ವಾತಾವರಣ ಹುಟ್ಟಿಕೊಂಡಿತು. ಸಂಭಾಷಣೆಗಳಲ್ಲಿ ಆಡುಮಾತಿನ ಬಳಕೆ ಹೆಚ್ಚಾಯಿತು. ಈ ಪ್ರಕಾರದಲ್ಲಿ ಪ್ರಗತಿಶೀಲರು ಸಿದ್ಧಹಸ್ತರು.

***Please cite this article as:*** ಶ್ರೀನಿವಾಸ. ಟಿ. (2023). ಕಥಾ ಸಾಹಿತ್ಯ: ಒಂದು ವಿಶ್ಲೇಷಣೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 2(4), 12–15.

ಮನುಷ್ಯನ ಭಾಷೆ, ಲಯ, ಭಾವನೆಗಳು, ಹೊಯ್ದಾಟ, ತುಡಿತ, ತುಮುಲಗಳಷ್ಟೆ ಕಥಾ ಚೌಕಟ್ಟಿಗೆ ಒಳಪಡುತ್ತವೆ ಎಂದೇನಿಲ್ಲ. ಸಾಹಿತ್ಯವನ್ನು ಕಾವ್ಯವೆಂದೇ ಪರಿಭಾವಿಸಲಾಗಿದೆ. ಆದರೆ ಬಹು ಶತಮಾನಗಳ ಹಿಂದೆಯೇ ಜನಪದೀಯ ರೂಪದಲ್ಲಿ ರೂಪು ತಳೆದಿದ್ದ ಕಥಾ ಪರಂಪರೆ ಇಂದಿನ ಕಾಲಕ್ಕೆ ತಕ್ಕಂತೆ ರೂಪುಗೊಂಡಿದ್ದು 19ನೇ ಶತಮಾನದ ಆರಂಭಕಾಲದಿಂದ. ಪಂಜೆ ಮಂಗೇಶರಾಯ, ಮಾಸ್ತಿ, ಕೆರೂರು ವಾಸುದೇವಾಚಾರ್ಯ, ಕಾಮತ್ ಮುಂತಾದವರಿಂದ ಶುರುವಾದ ಸಿದ್ದ ನೂತನ ಮಾದರಿ ಪ್ರಾರಂಭಿಸಲ್ಪಟ್ಟಿತು. ಜಗತ್ತಿನ ಯಾವ ಭಾಷೆಯ ಕಥೆಗಳಿಗಿಂತಲೂ ಕನ್ನಡದ ಕಥೆಗಳು ಕಡಿಮೆಯಿಲ್ಲದೆ ಮೈದಳೆದಿರುವ ರೀತಿ ಬೆರಗು ಹುಟ್ಟಿಸುವಂತದ್ದು. ಸಾಮಾಜಿಕ ಮೌಲ್ಯಗಳ ಪರಿಶೀಲನೆ, ಸುಧಾರಣೆ ಹಾಗು ಜೀವನಾನುಕಂಪದೊಂದಿಗೆ ಬೆಳೆದ ಕಥಾ ಪರಂಪರೆ ವಿವಿಧ ಕಾಲಘಟ್ಟಗಳಲ್ಲಿ ಮನೋವಿಶ್ಲೇಷಣಾತ್ಮಕ, ಅಸಮಾನತೆ, ಅನ್ಯಾಯದ ವಿರುದ್ದ ಚಳುವಳಿಯಾಗಿ, ತಾತ್ವಿಕ ನೆಲೆಗೆ ಮುಖಾಮುಖಿಯಾಗಿ, ಗೊಡ್ಡು ಸಂಪ್ರದಾಯಗಳಿಗೆ ಸವಾಲಾಗಿ, ಜನರ ಒಳತೋಟಿ, ವೈವಿಧ್ಯಮಯ ಬದುಕು, ಜಾಗತೀಕರಣ, ಉದಾರೀಕರಣ, ಖಾಸಗೀಕರಣದ ವಿರುದ್ದದ ಅಕ್ಷರ ರೂಪದ ಹೋರಾಟವಾಗಿ ಕೋಮುವಾದಕ್ಕೆ ಸೆಡ್ಡು ಹೊಡೆದು ಮಾನವ ಪ್ರೇಮ ಎತ್ತಿ ಹಿಡಿಯುವ ಅಸ್ತ್ರವಾಗಿ, ಕ್ಲೀಷೆ ಎನ್ನಬಹುದಾದ ಪ್ರೇಮ, ಕಾಮ, ಲೈಂಗಿಕತೆಯಿಂದ ಬೇರೊಂದು ನೈಜ ಪ್ರೀತಿಯ ಜಗತ್ತಿನ ಹುಡುಕಾಟವಾಗಿ, ಜನರ ದನಿಯೇ ಎಂಬಂತೆ ಸಣ್ಣ ಕಥೆಗಳು ಬದಲಾದ ಬಗೆ ನಿಜಕ್ಕೂ ಆಶಾದಾಯಕ.

ಸಣ್ಣಕಥೆ ಪ್ರಕಾರ ಆರಂಭದಲ್ಲಿ ಪಾಶ್ಚಾತ್ಯ ಕಥೆಗಳ ಅನುಕರಣೆ ಮಟ್ಟ ಮೀರಿ ತನ್ನದೇ ಆದ ವಿಶಿಷ್ಟ ಹಾಗು ಪ್ರಾದೇಶಿಕತೆಯನ್ನು ಮೈಗೂಡಿಸಿಕೊಂಡು ಬೆಳೆಯಿತು. ಇತ್ತೀಚೆಗೆ ಓದುಗರ ಸಂಖ್ಯೆ ಕಡಿಮೆಯಾಗುತ್ತಿದೆ ಎಂಬ ಆತಂಕದ ಮಧ್ಯೆಯೂ ಕಥಾಜಗತ್ತು ಸೊರಗಿಲ್ಲ. ಆಧುನಿಕ ಸಾಮಾಜಿಕ ಮಾಧ್ಯಮಗಳ ಪ್ರಭಾವದಿಂದ ಜಗತ್ತಿನ ಎಲ್ಲೆಡೆಯೂ ಓದುಗರಿಗೆ ಸಾಹಿತ್ಯ ಲಭ್ಯವಾಗುತ್ತಿರುವ ಕಾರಣದಿಂದ ವಾಚಕರ ಸಂಖ್ಯೆಯೂ ಹೆಚ್ಚಾಗುತ್ತಿದೆ. ಹೊಸತನ, ನಾವಿನ್ಯತೆ ಹಾಗು ಬದಲಾಗುತ್ತಿರುವ ಜಗತ್ತಿನಲ್ಲಿ ಬದುಕು ಸಂಕೀರ್ಣಗೊಳ್ಳುತ್ತಿದ್ದು ಮೌಲ್ಯಗಳು ಕುಸಿಯುತ್ತಿವೆ. ಮಾನವೀಯ ಪ್ರೀತಿ, ಪ್ರೇಮದ ಆಶಯಗಳು ಕೇವಲ ಉಪದೇಶ, ಬರಹಕ್ಕೆ ಸೀಮಿತವಾಗಿದೆಯೇನೊ ಎಂದೆನಿಸುತ್ತದೆ. ಇಂದಿಗೂ ನವ್ಯೋತ್ತರ, ನವ್ಯದ ಆಶಯಗಳುಳ್ಳ ಕಥೆಗಳು ರಚನೆಯಾಗುತ್ತಿವೆ. ಕನ್ನಡ ಸಾಹಿತ್ಯದಲ್ಲಿ ಕ್ರಾಂತಿಕಾರಕ ಬದಲಾವಣೆಗೆ ನಾಂದಿ ಹಾಡಿದ ಬಂಡಾಯ ಸಾಹಿತ್ಯದ ಛಾಪು ಈಗಲೂ ಅನೇಕ ಕೃತಿಗಳಲ್ಲಿ ಢಾಳಾಗಿ ಕಾಣುತ್ತಿದೆ.

ನವೋದಯ ಸಾಹಿತ್ಯ ಘಟ್ಟದಲ್ಲಿ ಬಂದ ಭಾರತೀಪ್ರಿಯರ 'ಮೋಚಿ' (1932), ಬೆಟಗೇರಿ ಕೃಷ್ಣಶರ್ಮರ 'ಮಾಲ್ಕಿ ಹಕ್ಕು', ಕಡಂಗೋಡ್ಲು ಶಂಕರಭಟ್ಟರ 'ದುಡಿವ ಮಕ್ಕಳು', ಕೊರಡ್ಕಲ್ ಶ್ರೀನಿವಾಸರ 'ಧನಿಯರ ಸತ್ಯನಾರಾಯಣ' (1938), ಕುವೆಂಪುರವರ 'ಸಾಲದ ಮಗು' (1940), ಇಂದಿಗೂ ಮಹತ್ವದ ಕಥೆಗಳಾಗಿವೆ. ಈ ಕಥೆಗಳಲ್ಲಿ ಕೆಳವರ್ಗದ ಜನರ ಸ್ವಾಭಿಮಾನ, ದಲಿತ ಸಂವೇದನೆ, ಧಣಿ ಮತ್ತು ಜೀತಗಾರರ ಸಂಬಂಧಗಳ ಕುರಿತ ಸಾಮಾಜಿಕ ಅಂಶಗಳು ಚಿತ್ರಣಗೊಂಡಿವೆ.

ನವೋದಯ ಸಾಹಿತ್ಯದ ವಿರುದ್ಧ ಅಸಹನೆ ಮತ್ತು ಪ್ರತಿರೋಧವೆಂಬಂತೆ ಹುಟ್ಟಿಕೊಂಡಿದ್ದೇ ಪ್ರಗತಿಶೀಲ ಚಳುವಳಿ. ಪಾಶ್ಚಾತ್ಯ ಸಾಹಿತ್ಯದ ಪ್ರಭಾವಕ್ಕೆ ಪ್ರಗತಿಶೀಲ ಚಳುವಳಿ ಒಳಗಾಯಿತು. ನವೋದಯ ಕಥಾ ಸಾಹಿತ್ಯದಲ್ಲಿ ಒಡಮೂಡಿದ್ದ ಭಿನ್ನಮಾದರಿಗಳು ಇಲ್ಲಿ ಮಾಸಿದವು. ಆದರೂ ಕನ್ನಡ ಸಾಹಿತ್ಯದ ನೆಲೆಗಳನ್ನು ಹಿಗ್ಗಿಸಿದ ಕೀರ್ತಿ ಪ್ರಗತಿಶೀಲರಿಗೆ ಸಲ್ಲುತ್ತದೆ. 1943ರಲ್ಲಿ ಅನಕೃ ನೇತೃತ್ವದಲ್ಲಿ ಹುಟ್ಟಿಕೊಂಡ 'ಪ್ರಗತಿಶೀಲ ಲೇಖಕರ ಸಂಘ' ಹೊಸ ಕಥನ ಕಲೆಗೆ ವೇದಿಕೆಯಾಯಿತು. ನಿರಂಜನ, ಬಸವರಾಜ

ಕಟ್ಟೀಮನಿ, ಚದುರಂಗ, ತರಾಸು, ತ್ರಿವೇಣಿ, ಅನುಪಮ ನಿರಂಜನ ಮೊದಲಾದ ಪ್ರಮುಖ ಕಥೆಗಾರರು ಪ್ರಗತಿಶೀಲ ಚಳವಳಿಯ ಆಶಯಗಳನ್ನು ತಮ್ಮ ಕಥೆಗಳ ಮೂಲಕ ಪಾರಂಪರಿಕ ಮೌಲ್ಯಗಳನ್ನು ಪ್ರಶ್ನಿಸಿ, ಸಾಮಾಜಿಕ ಅಸಮಾನತೆಯ ವಿರುದ್ಧ ದನಿ ಎತ್ತಿದರು. ಆ ಮೂಲಕ ಕನ್ನಡ ಕಥಾ ಸಾಹಿತ್ಯ ಪರಂಪರೆಗೆ ಗಟ್ಟಿ ದ್ರವ್ಯ ನೀಡಿದ ಕಥೆಗಾರರಾದರು.

1953 ರಿಂದ 1973 ರವರೆಗೆ ರಚನೆಯಾದ ಕಥಾ ಸಾಹಿತ್ಯವನ್ನು ನವ್ಯ ಕಥಾ ಸಾಹಿತ್ಯವೆಂದು ಗುರುತಿಸುವುದು ವಾಡಿಕೆ. ರಾಮಚಂದ್ರಶರ್ಮ, ಯು.ಆರ್.ಅನಂತಮೂರ್ತಿ, ಪೂರ್ಣಚಂದ್ರ ತೇಜಸ್ವಿ, ದೇವನೂರ ಮಹಾದೇವ, ಪಿ.ಲಂಕೇಶ್, ಬೆಸಗರಹಳ್ಳಿ ರಾಮಣ್ಣ, ಜಿ.ಸದಾಶಿವ, ಶಾಂತಿನಾಥ ದೇಸಾಯಿ, ಕೆ. ಸದಾಶಿವ, ವೀಣಾಶಾಂತೇಶ್ವರ, ಎ.ಕೆ.ರಾಮಾನುಜನ್, ಚಂದ್ರಶೇಖರ ಕಂಬಾರ ಮುಂತಾದವರು ನವ್ಯ ಸಾಹಿತ್ಯ ಕಥಾ ಪರಂಪರೆಯನ್ನು ಬೆಳೆಸಿದರು

ಕನ್ನಡದ ನವ್ಯ ಕಥೆಗಳು ಬದುಕಿನ ವೈರುಧ್ಯ ಮತ್ತು ದ್ವಂದ್ವ ಶೋಧಿಸುತ್ತಾ ಬದುಕಿನ ಸ್ವ-ಅನುಭವವನ್ನು ಆತ್ಮ ವಿಮರ್ಶೆಗೊಳಪಡಿಸುವಲ್ಲಿ ಯಶಸ್ಸು ಸಾಧಿಸಿವೆ. ಬದುಕಿನ ಅನುಭವಗಳನ್ನು ಸಂಕೇತ, ಪ್ರತಿಮೆ, ರೂಪಕಗಳ ಮೂಲಕ ಕಾವ್ಯದಂತೆಯೇ ನವ್ಯ ಕಥೆಗಳು ರಚಿಸಲ್ಪಟ್ಟವು. ವಸ್ತು, ಭಾಷೆ, ತಂತ್ರ, ಪ್ರಯೋಗದಲ್ಲಿ ಹೊಸತನ ಸಾಧಿಸಿ ನವೀನ ಪರಿಣಾಮ ಮೂಡಿಸಿದವು. ರಾಜಕೀಯ ಮತ್ತು ನಿರೀಶ್ವರವಾದದಂತಹ ಸಮಕಾಲೀನ ಸಂಗತಿಗಳನ್ನು ಶೋಧಿಸುವಲ್ಲಿ ನವ್ಯ ಕಥೆಗಳ ತಂತ್ರಗಾರಿಕೆ ಅಡಗಿದೆ. ಮನುಷ್ಯ ಮತ್ತು ಇತರೆ ಅಂತರ್‌ಸಂಬಂಧಗಳನ್ನು ಸಮೃದ್ಧವಾಗಿ ಚಿತ್ರಿಸುವುದರ ಜೊತೆಗೆ ಹೊಸ ಸಮಾಜ ಮತ್ತು ಬದುಕಿನ ಹಂಬಲವನ್ನು ಇವು ಹೊಂದಿವೆ. ನವ್ಯದ ಕಥೆಗಾರರ ಮಾದರಿಗಳು ಮುಂದಿನ ನವ್ಯೋತ್ತರ ಕಾಲದ ಹಲವು ಕಥೆಗಾರರಲ್ಲೂ ಬೆರೆತುಕೊಂಡಿರುವುದನ್ನು ಕಾಣಬಹುದು.

ತೇಜಸ್ವಿಯವರ ‘ಅಬಚೂರಿನ ಪೋಸ್ಟಾಫೀಸು’ ನವ್ಯ ಮತ್ತು ಬಂಡಾಯ ಸಾಹಿತ್ಯದ ಸಂಧಿಕಾಲದ ಮಹತ್ವದ ಕಥಾ ಸಂಕಲನ. ನವ್ಯದ ಸೋಲುಗಳು ಮತ್ತು ನಂತರದ ಹೊಸತನದ ಹುಡುಕಾಟದ ಸಾಧ್ಯತೆಗಳನ್ನು ಈ ಸಂಕಲನ ಸಮರ್ಥವಾಗಿ ಚಿತ್ರಿಸುತ್ತದೆ. ಸಾಮಾಜಿಕ ಸಮಸ್ಯೆಗಳನ್ನು ಸಾಂದ್ರವಾಗಿ ಮತ್ತು ಕಲಾತ್ಮಕವಾಗಿ ದಾಖಲು ಮಾಡುವಲ್ಲಿ ತೇಜಸ್ವಿ ಸಿದ್ದಹಸ್ತರು. ಆಧುನಿಕತೆಯ ಪ್ರಭಾವದಿಂದ ಗ್ರಾಮೀಣ ಪರಿಸರ, ಸಂಸ್ಕೃತಿ ಮತ್ತು ತಾಂತ್ರಿಕ ಕೌಶಲ್ಯತೆ ಮೇಲಾಗುವ ಪಲ್ಲಟಗಳನ್ನು ಇವರ ಕಥೆಗಳು ಸಮರ್ಥವಾಗಿ ಹಿಡಿದಿಟ್ಟವು.

12ನೇ ಶತಮಾನದ ಸಾಮಾಜಿಕ ಕ್ರಾಂತಿಯ ಮರುಕಳಿಸುವಿಕೆ ಎಂಬಂತೆ ಸಾಹಿತ್ಯಕ ವಲಯದ ಮಡಿ ಮೈಲಿಗೆ ಕಳೆಯುವಲ್ಲಿ ಬಂಡಾಯ ದಲಿತ ಸಾಹಿತ್ಯ ಮಾರ್ಗ ಯಶಸ್ವಿಯಾಯಿತು. ಗ್ರಾಮೀಣ ಪರಿಸರದ, ಹಿಂದುಳಿದ ಅಲ್ಪಸಂಖ್ಯಾತ, ದೀನ-ದಲಿತ, ಅಸಹಾಯಕ ಹಾಗು ಬಡ ಕುಟುಂಬಗಳಲ್ಲಿ ಹುಟ್ಟಿ ಬೆಳೆದ ಮಹಿಳೆಯರನ್ನೊಳಗೊಂಡು ಅನೇಕ ಕಥೆಗಾರರು ಹೆಚ್ಚು ಸಶಕ್ತರಾಗಿ ಕಥೆಗಳ ರಚನೆಗೆ ಮುಂದಾದರು. ಅದುವರೆಗೂ ಅಷ್ಟಾಗಿ ಮುನ್ನೆಲೆಗೆ ಬಾರದ ಕತ್ತಲಲೋಕ ಇಲ್ಲಿ ಪರಿಚಯವಾಯಿತು. ದಲಿತ ವರ್ಗದ ಕಥೆಗಾರರು, ಮುಸ್ಲಿಂ ಕಥೆಗಾರರು ತಮ್ಮ ಸುತ್ತಲಿನ ಅನ್ಯಾಯ, ಅಸಮಾನತೆ, ದೌರ್ಜನ್ಯ, ದಬ್ಬಾಳಿಕೆ ವಿರುದ್ಧ ಗಟ್ಟಿ ದನಿ ಎತ್ತಿದರು.

ಎಂಬತ್ತರ ದಶಕದ ನಂತರ ಬಂದ ಕಥೆಗಳು ಕನ್ನಡಕ್ಕೆ ಹೊಸ ಸತ್ವ ಸೇರಿಸಿವೆ. ನವ್ಯದ ಅಭಿವ್ಯಕ್ತಿ ವಿಧಾನಗಳು ಮತ್ತು ತಾತ್ವಿಕತೆಯು ಈ ಕಥೆಗಾರರ ಅನುಭವ ಮತ್ತು ಸಾಮಾಜಿಕ ಸ್ಥರದೊಂದಿಗೆ ಹೊಂದಿಕೆಯಾಗದೆ ಸೃಷ್ಟಿಯಾದ ಬಿಕ್ಕಟ್ಟು ಮುಂದಿನ ಬಂಡಾಯ ದಲಿತ ಸಾಹಿತ್ಯ ರಚನೆಗೆ ನಾಂದಿಯಾಯಿತು. ದೇವರಾಜ ಅರಸರ ಭೂ ಸುಧಾರಣೆ, ಹಾವನೂರು ವರದಿ, ಬೂಸಾ ಪ್ರಕರಣ, ಜಾತಿ ವಿನಾಶ ಸಮ್ಮೇಳನ, ಬರಹಗಾರರ, ಕಲಾವಿದರ ಒಕ್ಕೂಟ, ದಲಿತ ಸಂಘರ್ಷ ಸಮಿತಿ, ರೈತ ಸಂಘದ

ಉದಯ, ಕನ್ನಡದ ವಿವಿಧ ಪ್ರಕಾರಗಳಲ್ಲಿ ತಾತ್ವಿಕ ಮಂಥನಕ್ಕೆ ಕಾರಣವಾದವು. ಇವೆಲ್ಲವು ಕೆಳವರ್ಗಗಳಲ್ಲಿ ಜಾಗೃತಿಗೆ ಕಾರಣವಾಯಿತು. ಬಂಡಾಯ ಸಾಹಿತ್ಯದ ಮೊದಲ ಮೊಳಕೆಯೊಡೆದದ್ದು ಸಣ್ಣ ಕಥೆಯ ಒಡಲಿನಿಂದ ಎಂಬುದನ್ನು ವಿಮರ್ಶಕ ರಹಮತ್ ತರಿಕೆರೆ ಗುರುತಿಸುತ್ತಾರೆ.

ದುಡಿಮೆಯ ಅನುಭವದ ಜೊತೆ ಗ್ರಾಮೀಣ ಪ್ರದೇಶದಲ್ಲಿ ಚಾಲ್ತಿಯಲ್ಲಿದ್ದ ಜಮೀನ್ದಾರಿ ದಬ್ಬಾಳಿಕೆ, ಅಸ್ಪೃಶ್ಯತೆ, ಅಸಮಾನತೆ, ತಾರತಮ್ಯ ಸಂವೇದನೆಗಳು ಕೆಳಜಾತಿ ಮತ್ತು ವರ್ಗಗಳಿಂದ ಬಂದ ಕಥೆಗಾರರನ್ನು ಬಹುವಾಗಿ ಕಾಡಿದವು. ಸಮಾಜವಾದಿ ಮತ್ತು ಎಡ ತಾತ್ವಿಕತೆಯೊಂದಿಗೆ ಬರೆದ ದೇವನೂರರ 'ದತ್ತ', 'ಅಮಾಸ', ಬರಗೂರರ 'ಅವನು ನಪುಂಸಕ', 'ಕ್ಷಾಮ', ನಾಗವಾರರ 'ಬಿಚ್ಚಿದ ಬಟ್ಟೆ', 'ಮೀನುಗಳು', ತೇಜಸ್ವಿಯವರ 'ಸ್ವರೂಪ', 'ತಬರನ ಕಥೆ' ಕೆಲವು ಉದಾಹರಣೆಗಳು. ಬಂಡಾಯ ಕಥನ ಸಾಹಿತ್ಯ ಮತ್ತು ಪರಂಪರೆ ಮಧ್ಯೆ ಕರುಳು ಬಳ್ಳಿ ಸಂಬಂಧವಿದೆ. ಗಾಢ ಜಾನಪದ ಸತ್ವ ಮೈಗೂಡಿಸಿಕೊಂಡು ಬರೆಯುವ ಲೇಖಕರು ತಮ್ಮ ಪ್ರಜ್ಞಾಪೂರ್ವಕತೆಯ ಮಿತಿಯೊಳಗೆ ಬರೆಯುತ್ತಾ ಹೊಸ ರೂಪಾಂತರ ಮತ್ತು ತಾತ್ವಿಕ ಆಯಾಮಗಳನ್ನು ತೊಡಿಸುವಲ್ಲಿ ವಿಫಲವಾಗಿರುವುದು ಎದ್ದು ಕಾಣುತ್ತದೆ. ವೈಚಾರಿಕತೆ ರಹಿತ ಜಾನಪದ ಸತ್ವದಲ್ಲೇ ಬರೆದ ಕಥೆಗಳು ಅನಗತ್ಯ ಅಲಂಕಾರದೊಂದಿಗೆ ಸೊರಗಿರುವುದನ್ನು ಗುರುತಿಸಬಹುದು. ತಾತ್ವಿಕತೆ ಮತ್ತು ಕಲೆಗಾರಿಕೆಯನ್ನು ಕಥೆಗಾರ ತನ್ನ ವಿಮರ್ಶಕ ಪ್ರಜ್ಞೆಯಿಂದ ಬಳಸಿದಾಗ ಉತ್ತಮ ಕೃತಿ ರಚನೆ ಸಾಧ್ಯ. ಮೇಲ್ವರ್ಗಕ್ಕೆ ಮುಜುಗರವಾಗುವ ಅನೇಕ ಸಂಗತಿಗಳು ದಲಿತ, ಮುಸ್ಲಿಂ ಮತ್ತು ಸ್ತ್ರೀ ಸಂವೇದನೆಯ ಕಥೆಗಳಲ್ಲಿ ಆಪ್ತವಾಗಿ ಚಿತ್ರಿತವಾಗಿವೆ. ಇವೆಲ್ಲದರ ಜೊತೆಗೆ ಬಂಡಾಯ ಸಾಹಿತ್ಯದಲ್ಲಿ ಮುಸ್ಲಿಂ ಲೇಖಕಿಯರು ಬರೆಯಲಾರಂಭಿಸಿದ್ದು ಒಂದು ದೊಡ್ಡ ಬದಲಾವಣೆಯಾಗಿ ಗೋಚರವಾಗುತ್ತದೆ. ಸಾರಾ ಅಬೂಬಕರ್, ಬಾನುಮುಸ್ತಾಕ್ ಮುಂತಾದವರು ಈ ವರ್ಗಕ್ಕೆ ಸೇರಿದವರು.

ಶಾಂತರಸ, ಕುಂ.ವೀರಭದ್ರಪ್ಪ, ಕಾಳೇಗೌಡ ನಾಗವಾರ, ಬಿ.ಟಿ.ಲಲಿತನಾಯಕ್, ಬರಗೂರು ರಾಮಚಂದ್ರಪ್ಪ, ಗೀತಾ ನಾಗಭೂಷಣ, ಅಬ್ದುಲ್ ರಶೀದ್, ಅಮರೇಶ ನುಗುಡೋಣಿ ಇನ್ನೂ ಮುಂತಾದ ಕಥೆಗಾರರು ದಲಿತ ಬಂಡಾಯ ಮನೋಭಾವದ ಬೆಳವಣಿಗೆಗೆ ಕಾರಣರಾಗಿದ್ದಾರೆ. ನೂರು ವರ್ಷ ಕಂಡ ಆಧುನಿಕ ಕನ್ನಡ ಕಥಾ ಜಗತ್ತಿಗೆ ಇಂದು ಜಾಗತೀಕರಣ, ಉದಾರೀಕರಣ, ತಾಂತ್ರಿಕ ವಿಜ್ಞಾನ, ಸಾಮ್ರಾಜ್ಯಶಾಹಿ ಶಕ್ತಿಗಳ ಮೇಲಾಟ ಹೊಸ ಸವಾಲುಗಳನ್ನು ಸೃಷ್ಟಿಸಿವೆ. ಆಧುನಿಕತೆ, ಜಾಗತೀಕರಣ ಮತ್ತು ಮಾಧ್ಯಮ ಕ್ರಾಂತಿ ಹೆಸರಲ್ಲಿ ಏನೆಲ್ಲಾ ಗಾಬರಿ ಹುಟ್ಟಿಸುವ ಸಂಗತಿಗಳು ನಡೆದರೂ ಸಾಹಿತ್ಯ ತನ್ನದೇ ಆದ ಗಾಂಭೀರ್ಯದಿಂದ ಮುನ್ನುಗ್ಗುತ್ತಿದೆ. ಸದ್ಯ ಯಾವುದೇ ಎದ್ದು ಕಾಣುವ ಸಾಹಿತ್ಯಕ ಚಳುವಳಿ ಪ್ರಭಾವ ಬೀರುವ ಅಂಶಗಳು ಅಷ್ಟಾಗಿ ಗೋಚರವಾಗುತ್ತಿಲ್ಲ. ಇಪ್ಪತ್ತನೆಯ ಶತಮಾನದ ಕನ್ನಡ ಸಣ್ಣ ಕಥಾ ಸಾಹಿತ್ಯ ಬಹುಮಟ್ಟಿಗೆ ಮಾನವೀಯತೆ, ಅವಮಾನ, ಕನ್ನಡ ಕಟ್ಟುವಿಕೆ ಮತ್ತು ಸಂಸ್ಕೃತಿಯ ಅರ್ಥ ಪರಂಪರೆಗಳನ್ನು ವ್ಯಾಖ್ಯಾನಿಸುತ್ತದೆ. ಹಾಗೆಯೇ ಕನ್ನಡ ಸಾಹಿತ್ಯದಲ್ಲಿ ಕಥನ ಸಾಹಿತ್ಯ ಬಹುದೂರ ಸಾಗಬಹುದಾದ ಪ್ರಾಕಾರ ಎಂಬುದರಲ್ಲಿ ಎರಡು ಮಾತಿಲ್ಲ.

**ಪರಾಮರ್ಶನ ಗ್ರಂಥಗಳು**


- ಅಶೋಕ ಟಿ.ಪಿ. (1993). ಪುಸ್ತಕ ಪ್ರೀತಿ. ಅಕ್ಷರ ಪ್ರಕಾಶನ.
- ಮಾಸ್ತಿ ವೆಂಕಟೇಶ ಅಯ್ಯಂಗಾರ್. (1986). *ಸಣ್ಣ ಕಥೆಗಳು.* ಅಂಕಿತ ಪ್ರಕಾಶನ.
- ರಾಮಾನುಜಂ, ಪಿ.ಎಸ್. (1985). ಕಥಾ ಗುಚ್ಛ. ಸಂವಹನ ಪ್ರಕಾಶನ.
- ಶೇಷಗಿರಿ ರಾವ್, ಎಲ್.ಎಸ್. (1975). *ಹೊಸಗನ್ನಡ ಸಾಹಿತ್ಯ ಚರಿತ್ರೆ.* ಸಪ್ನ ಬುಕ್ ಹೌಸ್.